# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಧಾರವಾಡ ಜಿಲ್ಲೆ, ಕುಂದಗೋಳ ತಾಲ್ಲೂಕಿನ ಗುಡಗೇರಿ ಗ್ರಾಮದ ಕುಡಿಯುವ ನೀರು ಸರಬರಾಜು ಯೋಜನೆಯಿಂದ ಗುಡಗೇರಿ ಗ್ರಾಮದ 1222 ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ (FHTC) ಕಲ್ಪಿಸುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:**
1. ದಿನಾಂಕ:03.08.2020ರಂದು ನಡೆದ SLSSC ಸಭೆಯ ನಡವಳಿಗಳು.
2. ಮುಖ್ಯ ಅಭಿಯಂತರರು, ಗ್ರಾ.ಕು.ನೀ.&ನೈ. ಇಲಾಖೆ ಇವರ ಕಡತ ಸಂ:ಗ್ರಾಕುನೀ&ನೈಇ/119/ಮುಇಂ/ತಾಂತ್ರಿಕ/2021-22

-----

**ಪೀಠಿಕೆ:**

ಕೇಂದ್ರ ಸರ್ಕಾರದ ಜಲ ಜೀವನ ಮಿಷನ್ (JJM) ಕಾರ್ಯಕ್ರಮದಡಿಯಲ್ಲಿ ರಾಜ್ಯದ ಎಲ್ಲಾ ಗ್ರಾಮೀಣ ಜನವಸತಿಗಳಿಗೆ 2023ರೊಳಗಾಗಿ ಕಾರ್ಯಾತ್ಮಕ ನಳ ನೀರು ಸಂಪರ್ಕವನ್ನು ಕಲ್ಪಿಸಬೇಕಾಗಿರುತ್ತದೆ.

ಧಾರವಾಡ ಜಿಲ್ಲೆ, ಕುಂದಗೋಳ ತಾಲ್ಲೂಕಿನ ಗುಡಗೇರಿ ಗ್ರಾಮದ ಕುಡಿಯುವ ನೀರು ಸರಬರಾಜು ಯೋಜನೆಯಿಂದ ಗುಡಗೇರಿ ಗ್ರಾಮದ 1222 ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ (FHTC) ಕಲ್ಪಿಸುವ ಕಾರ್ಯಕ್ರಮವನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ದಿನಾಂಕ:03.08.2020ರ SLSSC ಸಭೆಯಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ದೊರಕಿರುತ್ತದೆ. ಕಾಮಗಾರಿಯ ಅಂದಾಜು ಮೊತ್ತ **ರೂ.459.00ಲಕ್ಷಗಳಿಗೆ** ಮೇಲೆ ಓದಲಾದ (2) ರಲ್ಲಿ ಮುಖ್ಯ ಅಭಿಯಂತರರು, ಗ್ರಾ.ಕು.ನೀ.&ನೈ. ಇಲಾಖೆ, ಬೆಂಗಳೂರು ಇವರು ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಚಾಲ್ತಿ ಪಾರದರ್ಶಕ ನೀತಿಯನ್ವಯ ನಿಯಮಾನುಸಾರ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ ಹಾಗೂ ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರುರವರು ಮುಂದಿನ ಪ್ರಕ್ರಿಯೆಯನ್ನು ಅನುಸರಿಸಲು ಅನುವಾಗುವಂತೆ ಜಲ ಜೀವನ ಮಿಷನ್ (JJM) ಕಾರ್ಯಕ್ರಮದ ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಬೇಕಾಗಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂ: ಗ್ರಾಕುನೀ&ನೈಇ/200/ಗ್ರಾನೀಸ(4)/2021 ಬೆಂಗಳೂರು, ದಿನಾಂಕ: 17.08.2021.** /664

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಧಾರವಾಡ ಜಿಲ್ಲೆ, ಕುಂದಗೋಳ ತಾಲ್ಲೂಕಿನ ಗುಡಗೇರಿ ಗ್ರಾಮದ ಕುಡಿಯುವ ನೀರು ಸರಬರಾಜು ಯೋಜನೆಯಿಂದ ಗುಡಗೇರಿ ಗ್ರಾಮದ 1222 ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ (FHTC) ಕಲ್ಪಿಸುವ ಕಾಮಗಾರಿಯ ಅಂದಾಜು ಮೊತ್ತ **ರೂ.459.00ಲಕ್ಷ (ನಾಲ್ಕು ನೂರ ಐವತ್ತೊಂಭತ್ತು ಲಕ್ಷ ರೂಪಾಯಿಗಳು ಮಾತ್ರ) ಗಳಿಗೆ ಜಲ ಜೀವನ ಮಿಷನ್ (JJM) ಕಾರ್ಯಕ್ರಮದಡಿ** ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

**2. ಈ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ವಿನಿಯೋಗ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ:**

1. Retrofitting ಕಾಮಗಾರಿಗಳಿಗೆ ಪ್ರತಿ ಮನೆಗೆ ಅಂದಾಜು ಮೊತ್ತ ರೂ.15000/- ಮೀರಿದ ಹಾಗೂ Augmentation ಕಾಮಗಾರಿಗಳಿಗೆ ಅವಶ್ಯಕತೆಗೆ ಅನುಗುಣವಾಗಿ Components ಗಳನ್ನು ಪರಿಗಣಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ಟೆಂಡರ್ ಕರೆಯುವ ಪೂರ್ವದಲ್ಲಿ ಅಧೀಕ್ಷಕ ಅಭಿಯಂತರರಿಂದ ತಾಂತ್ರಿಕ ಪರಿಶೀಲನೆ ಮಾಡಿಕೊಂಡು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸೂಚಿಸಿದೆ.

2. ಕಾಮಗಾರಿಯನ್ನು ಪ್ರಾರಂಭಿಸುವ ಮುನ್ನ 15ನೇ ಹಣಕಾಸಿನಡಿ ಅಂದಾಜು ಮೊತ್ತದ 15% ಹಾಗೂ ಸಮುದಾಯ ವಂತಿಕೆಯ ಅಂದಾಜು ಮೊತ್ತದ 10% ಸಂಗ್ರಹವಾಗಿರುವ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು.
3. ಕಾಮಗಾರಿಯ ಅನುಷ್ಠಾನದಲ್ಲಿ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳತಕ್ಕದ್ದು ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ ಕಾರ್ಯಗತಗೊಳಿಸಬೇಕು.
4. ಸದರಿ ಅನುದಾನವನ್ನು ಕರ್ನಾಟಕ ಪಾರದರ್ಶಕ ಕಾಯ್ದೆ–1993 ಮತ್ತು ಕರ್ನಾಟಕ ಪಾರದರ್ಶಕ ನಿಯಮಗಳು–2000, ಕರ್ನಾಟಕ ಆರ್ಥಿಕ ಸಂಹಿತೆ–1958 ಹಾಗೂ ಚಾಲ್ತಿ ನಿಯಮಗಳನ್ನು ಅನುಸರಿಸತಕ್ಕದ್ದು.
5. ಕಾಮಗಾರಿಯ ಅನುಷ್ಠಾನದಲ್ಲಿ ಯಾವುದೇ ಬದಲಾವಣೆ ಮಾಡಬೇಕಾದ್ದಲ್ಲಿ ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆರವರಿಂದ ಒಪ್ಪಿಗೆ ಪಡೆಯತಕ್ಕದ್ದು.
6. ಕಾಮಗಾರಿಗೆ ನಿಗದಿಪಡಿಸಿದ ಅನುದಾನವನ್ನು ಬೇರೆ ಕಾಮಗಾರಿಗೆ ಅಥವಾ ಯೋಜನೆಗೆ ವರ್ಗಾಯಿಸತಕ್ಕದ್ದಲ್ಲ.
7. ಕಾಮಗಾರಿಯ ಅನುಷ್ಠಾನದ ಮೂರು ಹಂತದ GPS ಛಾಯಾ ಚಿತ್ರಗಳನ್ನು ತೆಗೆದು ನಿರ್ವಹಿಸತಕ್ಕದ್ದು.
8. ಕಾಮಗಾರಿ ಪ್ರಾರಂಭಿಸುವ ಪೂರ್ವದಲ್ಲಿ ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&ನೈ ವೃತ್ತ ಕಛೇರಿಯವರಿಂದ ತಾಂತ್ರಿಕ ಮಂಜೂರಾತಿ ಪಡೆದುಕೊಳ್ಳತಕ್ಕದ್ದು.
9. ಎಲ್ಲಾ ತಾಂತ್ರಿಕ ಅಂಶಗಳನ್ನು JJM ಮಾರ್ಗಸೂಚಿಗಳನ್ವಯ ಪರಿಶೀಲಿಸಿದ ನಂತರ ತಾಂತ್ರಿಕ ಮಂಜೂರಾತಿ ನೀಡತಕ್ಕದ್ದು.
10. ತಾಂತ್ರಿಕ ಮಂಜೂರಾತಿ ನೀಡುವ ಮುನ್ನ ಕಾಮಗಾರಿಯ ಜಲಮೂಲದ ಸುಸ್ಥಿರತೆ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು.
11. ಕಾಮಗಾರಿಯಲ್ಲಿ ಪರಿಗಣಿಸಿರುವ ಪ್ರಾಕ್ಷೇಪಿತ ಜನಸಂಖ್ಯೆ (Decadal Growth Rate) ಬಗ್ಗೆ ಪರಿಶೀಲಿಸಿದ ನಂತರ ತಾಂತ್ರಿಕ ಮಂಜೂರಾತಿ ನೀಡಲು ಕ್ರಮವಹಿಸತಕ್ಕದ್ದು.
12. ಈ ಆದೇಶದಡಿ ಅನುಮೋದನೆಯಾದ ಯೋಜನೆಗೆ ಅಂದಾಜು ಮೊತ್ತದ ವ್ಯಾಪ್ತಿಯೊಳಗೆ ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&ನೈ ವೃತ್ತ ಕಛೇರಿಯವರಿಂದ ದೃಢೀಕರಿಸಿದ ತಾಂತ್ರಿಕ ಅನುಮೋದನೆಯನ್ವಯ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು IMISನಡಿ ದಾಖಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಉಪ ಕಾರ್ಯದರ್ಶಿ (ಆಡಳಿತ),
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ –AG/A&E) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–I – G&SSA- AUDIT) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು– II – E&RSA-) ಕರ್ನಾಟಕ, ಬೆಂಗಳೂರು.
4. ಅಧ್ಯಕ್ಷರು, ಜಿಲ್ಲಾ ಪಂಚಾಯತ್, **ಧಾರವಾಡ**.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಆಯುಕ್ತರು, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.
8. ಮುಖ್ಯ ಅಭಿಯಂತರರು, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
9. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು
10. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, **ಧಾರವಾಡ.**
11. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ ಕಛೇರಿ, **ಬೆಳಗಾವಿ.**
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
13. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ, "ಕರ್ನಾಟಕ ವಿಕಾಸ", ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
14. ಮುಖ್ಯ ಲೆಕ್ಕಾಧಿಕಾರಿ, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.
15. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗ, **ಧಾರವಾಡ.**
16. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು), ಬಹುಮಹಡಿ ಕಟ್ಟಡ, ಬೆಂಗಳೂರು.
17. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ), ಬೆಂಗಳೂರು.
18. ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು), ಬಹುಮಹಡಿ ಕಟ್ಟಡ ಬೆಂಗಳೂರು.
19. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.